CW-14
PW-09

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 04/2022

ದಿ. 16-06-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-14
ಫ್ರಾಸಾ-09

| | |
|---|---|
| ಸಾಕ್ಷಿದಾರರ ಹೆಸರು | ಗೀತಾಂಜಲಿ ಶಿಂಧೆ |
| ತಂದೆಯ/ಗಂಡನ ಹೆಸರು | ಸೋಮೇಶ್ ನಾಯಕ |
| ವಯಸ್ಸು | 35 ವರ್ಷ |
| ಉದ್ಯೋಗ | ಪಿ.ಎಸ್.ಐ.ಕೊಟ್ಟುರು ಪೊಲೀಸ್ ಠಾಣೆ |
| ವಾಸಸ್ಥಳ | ಕೊಟ್ಟುರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1.ನಾನು 2021 ರಿಂದ ಡಿಸೆಂಬರ್ 2022 ರವರೆಗೆ ಸಿರವಾರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 06-12-2021 ರಾತ್ರಿ 09-30 ಗಂಟೆ ಸಮಯದಲ್ಲಿ ಚಾಸಾ-1 ಶ್ರೀಮತಿ ಲಕ್ಷ್ಮೀರವರು ಠಾಣೆಗೆ ಹಾಜರಾಗಿ ಲಿಖಿತ ದೂರೊಂದನ್ನು ನೀಡಿದ್ದು, ಸದರಿ ದೂರನ್ನು ಪರಿಶೀಲಿಸಿ ಠಾಣಾ ಮೊಕದ್ದಮೆ ಸಂಖ್ಯೆ 183/2021 ರಂತೆ ಈ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಪ್ರಸ್ತುತ

CW-14
PW-09

ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ತಮ್ಮ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸುತ್ತಾರೆ, ಮತ್ತು ಪ್ರಥಮ ವರ್ತಮಾನ ವರದಿಯನ್ನು ನಿಪಿ-11 ಎಂದು ಮತ್ತು ತಮ್ಮ ಸಹಿಯನ್ನು ನಿಪಿ-11(ಎ) ಎಂದು ಗುರುತಿಸುತ್ತಾರೆ. ತದನಂತರ ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ-15 ರವರಿಗೆ ವರ್ಗಾಯಿಸಿರುತ್ತೇನೆ.

**<u>ಪಾಟೀ ಸವಾಲು ಶ್ರೀ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರಃ</u>**

3. ಆ ದಿನ ದೂರು ನೀಡಲು ಪಿರ್ಯಾದಿದಾರರ ಜೊತೆ ಅವರ ಗಂಡ ಠಾಣೆಗೆ ಬಂದಿರುತ್ತಾರೆ. ನಾನು ಆ ದಿನ ಪೂರ್ತಾ ದಿನ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಆ ದಿನ ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪಿರ್ಯಾದನ್ನು ಯಾರು ಎಲ್ಲಿ ತಯಾರಿಸಿದ್ದಾರೆ ಎಂದರೆ ಸಾಕ್ಷಿ ಠಾಣೆಗೆ ಲಿಖಿತ ಪಿರ್ಯಾದಿನೊಂದಿಗೆ ಚಾಸಾ-1 ರವರು ಹಾಜರಾಗಿರುತ್ತಾರೆ. ಸದರಿ ಪಿರ್ಯಾದಿನಲ್ಲಿ ಸಾಯಿಬಣ್ಣ ಎನ್ನುವವರು ದೂರು ಬರೆದಿರುವ ಬಗ್ಗೆ ಒಕ್ಕಣೆ ಇದೆ ಎನ್ನುತ್ತಾರೆ. ನಾನು ಸದರಿ ಸಾಯಿಬಣ್ಣರವರನ್ನು ನೋಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ರಾತ್ರಿ 10-30 ರ ಸಮಯದಲ್ಲಿ ಪೊಲೀಸ್ ಪೇದೆ ಸಂಖ್ಯೆ 186 ಶರಣಬಸಪ್ಪನವರೊಂದಿಗೆ ನ್ಯಾಯಾಧೀಶರಿಗೆ ತಲುಪಿಸಲು ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ತಲುಪಿಸಿದ ಸಂಬಂಧ ಸ್ವೀಕೃತಿಯನ್ನು ನಾನು ಪಡೆದುಕೊಂಡಿರುವುದಿಲ್ಲ ಬದಲಿಗೆ

CW-14
PW-09

ತನಿಖಾಧಿಕಾರಿಗಳು ಪಡೆದುಕೊಂಡಿರುತ್ತಾರೆ. ನಾನು ಸುಳ್ಳು ಪಿರ್ಯಾದಿನ ಆಧಾರದ ಮೇಲೆ ಸುಳ್ಳು ಪ್ರಕರಣದ ದಾಖಲಿಸಿ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಪಿರ್ಯಾದಿದಾರರು ಠಾಣೆಗೆ ಹಾಜರಾಗಿಲ್ಲ ಮತ್ತು ನಾನು ಯಾವುದೇ ದೂರನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.